# ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು

ಸಂಖ್ಯೆ:ಸಿ7(8)ಪ್ರಾ.ಶಿ.ಅ/ಆರ್.ಟಿ.ಇ/ದಾಖಲಾತಿ/473/2015-16 ದಿನಾಂಕ: 07-05-2016

**ಅತಿ ತುರ್ತು**

## : : ಜ್ಞಾಪನ : :

ವಿಷಯ: ಆರ್.ಟಿ.ಇ ಆನ್‌ಲೈನ್ ಪ್ರಕ್ರಿಯೆಯಲ್ಲಿ ಆಯ್ಕೆಯಾದ ಮಕ್ಕಳ ದಾಖಲಾತಿಗೆ ಸಂಬಂಧಿಸಿದಂತೆ ಅನುಸರಿಸಬೇಕಾದ ಕ್ರಮಗಳ ಕುರಿತು.

ಉಲ್ಲೇಖ:1. ಸರ್ಕಾರದ ಆದೇಶ ಸಂಖ್ಯೆ: ಇಡಿ 51 ಪಿಜಿಸಿ 2016(ಪಿ), ದಿನಾಂಕ:08.02.2016

2.ಈ ಕಛೇರಿ ಸಮಪತ್ರದ ಸುತ್ತೋಲೆ ದಿನಾಂಕ:12-02-2016.

3. ಈ ಕಛೇರಿ ಸಮ ಪತ್ರದ ಸುತ್ತೋಲೆ ದಿನಾಂಕ: 07.05.2016.

**********

ಮೇಲ್ಕಂಡ ವಿಷಯದನ್ವಯ 2016-17ನೇ ಸಾಲಿನಲ್ಲಿ ಶಿಕ್ಷಣ ಹಕ್ಕು ಕಾಯಿದೆ ಅಡಿ ಆನ್‌ಲೈನ್ ಲಾಟರಿ ಪ್ರಕ್ರಿಯೆಯಲ್ಲಿ ಆಯ್ಕೆಯಾದ ಮಕ್ಕಳ ದಾಖಲಾತಿಗೆ ಸಂಬಂಧಿಸಿದಂತೆ ಉಲ್ಲೇಖ(1)ರ ಸರ್ಕಾರದ ಆದೇಶ ಹಾಗೂ ಉಲ್ಲೇಖ(2) ಮತ್ತು ಉಲ್ಲೇಖ(3)ರ ಸುತ್ತೋಲೆಯಂತೆ ಕೆಳಕಂಡ ಸೂಚನೆಗಳ ಅನುಸಾರ ಕ್ರಮವಹಿಸುವುದು.

1. ಆಯ್ಕೆಯಾದ ಮಕ್ಕಳ ದಾಖಲಾತಿಗಳನ್ನು ಎರಡು ರೀತಿಯ ಮೂಲ ಅಂಶಗಳನ್ನು ಆಧರಿಸಿ ಪರಿಶೀಲನೆ ಮಾಡಬೇಕು.
   1) ಆಯ್ಕೆ ನಂತರದ ಪರಿಶೀಲನೆಗೆ ಅಗತ್ಯವಿರುವ ಮಕ್ಕಳ ಪಟ್ಟಿಯನ್ನು ಇ-ಮೇಲ್ ಮೂಲಕ ಸಂಬಂಧಿಸಿದ ಉಪನಿರ್ದೇಶಕರು(ಆಡಳಿತ)/ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಕಳುಹಿಸಿಕೊಡಲಾಗುವುದು.
   2) ಉಲ್ಲೇಖ(3) ರ ಆಂಗ್ಲ ಭಾಷಾ ಸುತ್ತೋಲೆಯಲ್ಲಿ ತಿಳಿಸಿರುವಂತೆ ಐದು ರೀತಿಯ ಪ್ರಕರಣಗಳಿಗೆ ಸಂಬಂಧಿಸಿದಂತೆ, ಪರಿಶೀಲನೆ ಮಾಡಬೇಕು. ಮೊದಲ 4 ಪ್ರಕರಣಗಳ ಮರುಪರಿಶೀಲನೆಯು ನಿರ್ದಿಷ್ಟ ಉದ್ದೇಶಕ್ಕೆ ಮಾತ್ರ ಇದ್ದು, ಅವುಗಳನ್ನು ಲಭ್ಯವಿರುವ ಭೌತಿಕ ದಾಖಲೆಗಳು ಅಥವಾ ಡಾಟಾಬೇಸ್ ಅಥವಾ ಸ್ಥಳೀಯ ಮಾಹಿತಿಯನ್ನು ಆಧರಿಸಿ ಪರಿಶೀಲಿಸಬೇಕು.
   3) ಉಲ್ಲೇಖ(3)ರ ಆಂಗ್ಲ ಭಾಷಾ ಸುತ್ತೋಲೆಯಲ್ಲಿ ತಿಳಿಸಿರುವ ಐದನೇ ಪ್ರಕರಣಕ್ಕೆ ಸಂಬಂಧಿಸಿದಂತೆ ಅಭ್ಯರ್ಥಿಗಳು ವಾಸಿಸುವ ವಾರ್ಡ್‌ನ ವ್ಯಾಪ್ತಿಯಲ್ಲಿ ಸರ್ಕಾರಿ, ಅನುದಾನಿತ ಅಥವಾ ಅನುದಾನರಹಿತ ಶಾಲೆಗಳು ಇದ್ದು, ವಾರ್ಡ್‌ನ ವ್ಯಾಪ್ತಿಯ ಹೊರಗೆ ಅರ್ಜಿ ಸಲ್ಲಿಸಿದ ಪ್ರಕರಣಗಳಿಗೆ ಸಂಬಂಧಿಸಿದಂತೆ ವಾರ್ಡ್ ಪರಿಶೀಲನೆಯನ್ನು ಸ್ಥಳೀಯ ಸಂಸ್ಥೆಗಳ ಅಂದರೆ ಮಹಾನಗರ ಪಾಲಿಕೆ/ ನಗರ ಪಾಲಿಕೆ/ನಗರ ಸಭೆ/ ಪುರಸಭೆ/ಪಟ್ಟಣ ಪಂಚಾಯಿತಿ ಈ ಕಛೇರಿಗಳ ಸಹಯೋಗದೊಂದಿಗೆ ಪರಿಶೀಲಿಸಿ, ಅಭ್ಯರ್ಥಿಗಳು ಅರ್ಜಿಯಲ್ಲಿ ನೀಡಿರುವ ವಾಸಸ್ಥಳದ ವಿಳಾಸವು, ಸೀಟು ಹಂಚಿಕೆ ಮಾಡಿದ ಶಾಲೆಯ ವಾರ್ಡ್ ಒಳಗೆ ಇರುವುದನ್ನು ಖಚಿತ ಪಡಿಸಿಕೊಳ್ಳಬೇಕು. ವಾರ್ಡ್ ವ್ಯಾಪ್ತಿಯ ಹೊರಗೆ ಇದ್ದಲ್ಲಿ ಆಯ್ಕೆಯನ್ನು ರದ್ದು ಪಡಿಸಬೇಕು. ಯಾವುದೇ ವಾರ್ಡ್‌ನಲ್ಲಿ ಯಾವುದೇ ಶಾಲೆ ಇಲ್ಲದಿದ್ದಲ್ಲಿ ದಿನಾಂಕ:08-02-2016ರ ಸರ್ಕಾರದ ಆದೇಶದಂತೆ ಕ್ರಮವಹಿಸುವುದು.
2. ಅನಾಥ ಮಗು, ಹೆಚ್.ಐ.ವಿ ಬಾಧಿತ/ಸೋಂಕಿತ ಮಗು, ಮಂಗಳಮುಖಿ ಮಗು, ಅಂಗವಿಕಲ ಮಗು ಮತ್ತು ವಲಸೆ ಮತ್ತು ಬೀದಿ ಮಕ್ಕಳ ಕೋಟಾದ ಅಡಿಯಲ್ಲಿ ನೇರ ಆಯ್ಕೆಯಾದ ಮಕ್ಕಳಿಗೆ ಸಂಬಂಧಿಸಿದಂತೆ ಆಯಾ ಪ್ರಾಧಿಕಾರದಿಂದ ಪಡೆದಿರುವ ಪ್ರಮಾಣ ಪತ್ರಗಳ ಜೆರಾಕ್ಸ್ ಪ್ರತಿಗಳನ್ನು ದೃಢೀಕರಿಸಿ ಸಂಬಂಧಿಸಿದ ಶಾಲೆಗಳಿಗೆ ಕಳುಹಿಸಿಕೊಡುವುದು.

3. ಸುಳ್ಳು ದಾಖಲಾತಿಗಳ ಬಗ್ಗೆ ಏನಾದರೂ ದೂರುಗಳು ಬಂದಲ್ಲಿ ಅಂತಹ ಪ್ರಕರಣಗಳನ್ನು ಆದ್ಯತೆ ಮೇಲೆ ಪರಿಗಣಿಸಿ ದಾಖಲಾತಿಗಳ ನೈಜತೆಯನ್ನು ಪರಿಶೀಲಿಸಿದ ನಂತರವೇ ದಾಖಲಾತಿಗೆ ಅವಕಾಶ ಮಾಡಿಕೊಡುವುದು.
4. ಆಯ್ಕೆಯಾದ ಮಕ್ಕಳ ಪೋಷಕರಿಗೆ **ದಿನಾಂಕ:10-05-2016 ರಿಂದ 20-05-2016ರ** ಒಳಗಾಗಿ ಆಯ್ಕೆಯಾದ ಶಾಲೆಗಳಲ್ಲಿ ದಾಖಲಾತಿ ಮಾಡಿಕೊಳ್ಳುವಂತೆ ಸೂಕ್ತ ಮಾಹಿತಿ ಒದಗಿಸುವುದು ಅಲ್ಲದೇ ಕಛೇರಿ ಮತ್ತು ಶಾಲಾ ಸೂಚನಾ ಫಲಕಗಳಲ್ಲಿ ಆಯ್ಕೆಯಾದ ಮಕ್ಕಳ ಮಾಹಿತಿಯನ್ನು ಮತ್ತು ದಾಖಲಾತಿಯ ಕೊನೆಯ ದಿನಾಂಕದ ಬಗ್ಗೆ ಪ್ರಕಟಿಸಲು ಕ್ರಮವಹಿಸುವುದು. ಅಲ್ಲದೇ ಸಂಬಂಧಿಸಿದ ಸಿಆರ್‌ಪಿ/ಬಿಆರ್‌ಪಿ ಗಳಿಗೆ 3 ರಿಂದ 4 ಶಾಲೆಗಳನ್ನು ಹಂಚಿಕೆ ಮಾಡಿ, ಶಾಲೆಗಳಲ್ಲಿ ದಾಖಲಾದ ಮಕ್ಕಳ ಮಾಹಿತಿಯನ್ನು ತಂತ್ರಾಂಶದಲ್ಲಿ ಶಾಲಾ ಹಂತದಲ್ಲಿ ಅಪ್‌ಡೇಟ್ ಮಾಡಿಸುವುದು. ಶಾಲಾ ಹಂತದಲ್ಲಿ ಅಪ್‌ಡೇಟ್ ಆಗದಿದ್ದಲ್ಲಿ ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯಕ್ಕೆ ಅಗತ್ಯ ಮಾಹಿತಿ ನೀಡಿ ತಂತ್ರಾಂಶದಲ್ಲಿ ಅಪ್‌ಡೇಟ್ ಮಾಡಿಸುವುದು.
5. ಒಂದಕ್ಕಿಂತ ಹೆಚ್ಚು ಅರ್ಜಿಗಳನ್ನು ಸಲ್ಲಿಸಿ, ಆಯ್ಕೆಯಾಗಿದ್ದಲ್ಲಿ, ನಿಯಮಾನುಸಾರ ದಾಖಲೆಗಳು ಇರುವ ಒಂದು ಅರ್ಜಿಯನ್ನು ಮಾತ್ರ ಪರಿಗಣಿಸುವುದು. ಉಳಿದವುಗಳನ್ನು ತಿರಸ್ಕರಿಸುವುದು.
6. ಯಾವುದೇ ಶಾಲೆಗಳಲ್ಲಿ ಆನ್‌ಲೈನ್ ಪ್ರಕ್ರಿಯೆಯಲ್ಲಿ ಆಯ್ಕೆಯಾದ ಮಕ್ಕಳ ದಾಖಲಾತಿಯನ್ನು ನಿರಾಕರಿಸುವಂತಿಲ್ಲ. ಅಂತಹ ಶಾಲೆಗಳ ಬಗ್ಗೆ ಸಂಬಂಧಿಸಿದ ವಲಯ/ತಾಲ್ಲೂಕು ಕ್ಷೇತ್ರ ಶಿಕ್ಷಣಾಧಿಕಾರಿಗಳು ಸೂಕ್ತ ಕ್ರಮ ತೆಗೆದುಕೊಳ್ಳಲು ಸೂಚಿಸಲಾಗಿದೆ. ಅವಶ್ಯವಿದ್ದಲ್ಲಿ ಸಂಬಂಧಿಸಿದ ಉಪನಿರ್ದೇಶಕರು(ಆಡಳಿತ) ಇವರ ಸಹಾಯವನ್ನು ಪಡೆಯಲು ತಿಳಿಸಿದೆ. ಈ ಬಗ್ಗೆ ದೂರುಗಳಿದ್ದಲ್ಲಿ ಉಪನಿರ್ದೇಶಕರು(ಅಡಳಿತ) ಇವರು ಆದ್ಯತೆ ಮೇಲೆ ಪರಿಗಣಿಸಲು ಸೂಚಿಸಲಾಗಿದೆ.

ಮೇಲ್ಕಂಡ ಎಲ್ಲಾ ಅಂಶಗಳನ್ನು ಕಡ್ಡಾಯವಾಗಿ ಪಾಲಿಸಲು ಸೂಚಿಸಲಾಗಿದೆ. ಆಯ್ಕೆಯಾದ ಮಕ್ಕಳ ದಾಖಲಾತಿಗಳನ್ನು ಸಂಬಂಧಿಸಿದ ವಲಯ/ತಾಲ್ಲೂಕು ಕ್ಷೇತ್ರ ಶಿಕ್ಷಣಾಧಿಕಾರಿಗಳು ದೃಢೀಕರಿಸಿದ ನಂತರವೇ ಶಾಲೆಗಳಲ್ಲಿ ದಾಖಲಾತಿಗೆ ಅವಕಾಶ ಕಲ್ಪಿಸಿಕೊಡಲು ಕ್ರಮವಹಿಸುವುದು.

(ವಿ.ಪೊನ್ನುರಾಜ್ ಭಾಆಸೇ)
ಆಯುಕ್ತರು,
ಸಾರ್ವಜನಿಕ ಶಿಕ್ಷಣ ಇಲಾಖೆ

ರವರಿಗೆ:
1. ರಾಜ್ಯದ ಎಲ್ಲಾ ಉಪನಿರ್ದೇಶಕರು(ಆಡಳಿತ) ಇವರಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ.
2. ರಾಜ್ಯದ ಎಲ್ಲಾ ತಾಲ್ಲೂಕು/ವಲಯಗಳ ಕ್ಷೇತ್ರಶಿಕ್ಷಣಾಧಿಕಾರಿಗಳಿಗೆ (ಉಪನಿರ್ದೇಶಕರು (ಆಡಳಿತ) ಇವರ ಮುಖಾಂತರ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ.

ಪ್ರತಿಯನ್ನು:
1. ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ, ಕರ್ನಾಟಕ ಸರ್ಕಾರ, ಬಹುಮಹಡಿಗಳ ಕಟ್ಟಡ, ಬೆಂಗಳೂರು-01 ಇವರಿಗೆ ಗೌರವಗಳೊಂದಿಗೆ ಮಾಹಿತಿಗಾಗಿ ಸಲ್ಲಿಸಿದೆ.
2. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕಲಬುರಗಿ ಮತ್ತು ಧಾರವಾಡ ಇವರಿಗೆ ಮಾಹಿತಿಗಾಗಿ ಸಲ್ಲಿಸಿದೆ.